ಅವನ ಅರ್ಥಶಾಸ್ತ್ರದ ಬಿ.ಎ. ಡಿಗ್ರಿಯನ್ನೂ ನೆನಪಿಸಿತು.

ಈ ಮಂದಿಗೆಲ್ಲಾ ಗೀತೆ ಯಾಕೆ, ಇವರಿಗೆ ಬೇಕಾದುದು 'ಅರ್ಥಶಾಸ್ತ್ರ'– ಎಂದುಕೊಂಡು, ಶ್ರೀಕೃಷ್ಣನ ಮುಂದೆ ನಿಂತು ಕೈ ಜೋಡಿಸುತ್ತಿರುವಾಗ ತನ್ನ ಮುಂದೆಯೆ ಭಟ್ಟರಿಂದ ಗಂಧಪ್ರಸಾದ ಸ್ವೀಕರಿಸುತ್ತಿದ್ದ ಮನುಷ್ಯ ಕಣ್ಣಿಗೆ ಬಿದ್ದ. ಈತ, ಇಂಗ್ಲಿಷರು ಆಳುತ್ತಿದ್ದ ಕಾಲದಲ್ಲಿ ಯಾವುದೋ ಒಬ್ಬ ವಿಷಯಲಂಪಟ ಬಿಳಿದೊರೆಗೆ ಒಂದು ಭರಣಿ ತುಪ್ಪಕೊಟ್ಟು, ಎಂಥದೋ ಒಂದು ಕ್ವಾಲಿಫಿಕೇಶನು ತೋರಿಸಿ ಆರೋಗ್ಯ ಇಲಾಖೆಯಲ್ಲಿ ಹೇಗೋ ಒಂದು ಕೆಲಸ ಗಿಟ್ಟಿಸಿ, ಸ್ಯಾನಿಟರಿ ಇನ್ಸ್‌ಪೆಕ್ಟರನಾದ; ನಗರದ ಜನರ ಆರೋಗ್ಯವನ್ನು ಕೆಡಿಸಿ, ತನ್ನ ಆರೋಗ್ಯವನ್ನು ವರ್ಧಿಸಿಕೊಂಡ. ಅವನಪ್ಪ ಸಾಯುವಾಗ ಬಿಟ್ಟುಹೋಗಿದ್ದ ಮುರುಕು ಗುಡಿಸಲನ್ನು ಮುಗುಚಿ ಹಾಕಿ ಅದರ ಸ್ಥಳದಲ್ಲಿ ಮೈಸೂರರಮನೆಯನ್ನೇ ಏರಿಸಿ ಸುತ್ತುಮುತ್ತಲಿನ ಭೂಮಿಯೆಲ್ಲವನ್ನೂ ಖರೀದಿಸಿ ತನ್ನ ಮೂವರು ಹೆಣ್ಣುಮಕ್ಕಳಿಗೆ ಕ್ಯಾಬಿನೆಟ್ ಮಂತ್ರಿಗಳು ನಾಚುವ ತೆರದಲ್ಲಿ ಮದುವೆಯನ್ನು ಮಾಡಿಸಿ ತನ್ನ ಸುಪುತ್ರ ಎಫ್.ಆರ್.ಸಿ.ಎಸ್. ಮಾಡಿಕೊಂಡು ಬರುವ ದಿನವನ್ನು ಎದುರುನೋಡುತ್ತಿದ್ದ, ಪಾಂಡುರಂಗರಾಯ.

ಸ್ಯಾನಿಟರಿ ಇನ್ಸ್‌ಪೆಕ್ಟರನಾಗಿ ಹುಟ್ಟಿ, ಸ್ಯಾನಿಟರಿ ಇನ್ಸ್‌ಪೆಕ್ಟರನಾಗಿಯೇ ಬೆಳೆದು, ಸ್ಯಾನಿಟರಿ ಇನ್ಸ್‌ಪೆಕ್ಟರನಾಗಿಯೇ ಸಾಯಲಿರುವ ಪಾಂಡುರಂಗರಾಯ. ಬಡ್ತಿಯಿಲ್ಲದೆ, ಸ್ಟ್ರೈಕು ಮಾಡದೆ, ಏರಿಲ್ಲದೆ. ಪೇರಿಲ್ಲದೆ, ಸದ್ದಿಲ್ಲದೆ ಸದಾ ಶ್ರೀಕೃಷ್ಣನ್ನು ಭಜಿಸಿ ಅವನಿಗೆ ಹಾಲುಕೊಟ್ಟು, ಬೆಣ್ಣೆಕೊಟ್ಟು 'ನನ್ನ ಹಣದ ಝಣಝಣತ್ಕಾರಕ್ಕೆ ಸರಿಯಾಗಿ ನೀನು ಕೊಳಲನ್ನು ಬಾರಿಸು' ಎಂದು ಪ್ರಾರ್ಥಿಸಿ, ಶ್ರೀಕೃಷ್ಣನ ಅತಿಸಮೀಪದ ಭಕ್ತನಾಗಿ, ಕನಕಸ್ವಾಮಿಯಾಗಿ, ಅವನ ಕೃಪೆಗೆ ಪಾತ್ರನಾಗಿ ನಗರದವರ ಆರೋಗ್ಯವು ತನ್ನ ಆರೋಗ್ಯವನ್ನು ಕೆಡಿಸದಂತೆ ನೋಡಿಕೊಳ್ಳುತ್ತಿದ್ದ. ಅವನ ಕೊನೆಯ ಮಗಳು ಚಂಚಲೆ ತಾನು ಬಿ.ಎ.ಯಲ್ಲಿ ಅರ್ಥಶಾಸ್ತ್ರವನ್ನು ಓದುತ್ತಿರುವಾಗ ಆ ಕಡೆಯ ಬೆಂಚಿನಲ್ಲಿ ಕುಳಿತು ಅರ್ಥಶಾಸ್ತ್ರವನ್ನು ಕಚ್ಚಿ ಕಚ್ಚಿ ಹಾಕುತ್ತಿದ್ದಾಕೆ, ಚಂಚಲವಾದ ಚಪಲವಾದ ಜಿಂಕೆಯ ಕಣ್ಣುಗಳುಳ್ಳಾಕೆ, ಕಮಲದೆಸಳಿನ ಬಣ್ಣ ಮತ್ತು ಮುತ್ತು ಸುರಿವಂತೆ ಮುಗುಳ್ನಗುವಾಕೆ... ಅರೇಬಿಯನ್ ನೈಟ್ಸ್‌ನೊಳಗಣ ಅರಗುವರಿಯಂತೆ, ಹೈಹೀಲಿನ ಮೇಲೆ ಬಳುಕುತ್ತಾ ನಡೆಯುವ ಅವಳ ವಿನ್ಯಾಸ, ಅವಳ ಕೊರಳು ಕೊಂಕುವ, ಎದೆಯು ತೊನೆಯುವ, ತುಟಿಯು ಬಿರಿಯುವ ಮಾಟನೋಟಗಳೆಲ್ಲಾ ಒಂದಾಗಿ ಒಮ್ಮೆಲೇ ಮುಂಗಾರು ಮಳೆಗೆ ಒತ್ತರದಿಂದ ಧುಮುಕುವ ಬೆಟ್ಟದ ಅಬ್ಬಿಯಂತೆ ವೆಂಕಟರಮಣನ ಮನಸಿನೊಳಗೆ ಜಿಗಿದೆದ್ದಿತು. ಚಂಚಲೆಯ ಪ್ರೇಮಕ್ಕಾಗಿ ತಾನು ನಡೆಸಿದ ಪ್ರಯತ್ನ, ತಾನು ಸಿನಿಮದ ನಾಯಕನಾಗಿ ಅವಳು ಅದರ ನಾಯಕಿಯಾಗಿ ಮೂರು ವರ್ಷಗಳು ಕಂಡ ಕನಸು, ಕೊನೆಗೆ ಬಿ.ಎ. ಮುಗಿದಾಗ ಗರೀಬ ಹೀರೊ ಮತ್ತು ಸಿರಿವಂತ ಹೀರೊಯಿನ್‌ಗಳ ಕತೆ ಸಿನಿಮಕ್ಕೇ ಸೀಮಿತವಾಗಿ ತನ್ನ ಪ್ರೇಮಸ್ವಪ್ನದ ಬಂಗಾರದ ಹೂವಿನ ಮೇಲೆ ವಾಸ್ತವಿಕತೆಯ ಕಲ್ಲುಬಂಡೆ ಬಂದಪ್ಪಳಿಸಿದುದನ್ನು ನೆನೆದ, ವೆಂಕಟರಮಣ.

ಒತ್ತೊತ್ತಾಗಿ ಪ್ರಸಾದಾರ್ಥಿಗಳಾಗಿ ನಿಂತಿದ್ದ ಹೆಣ್ಣು ಗಂಡುಗಳ ಒತ್ತಡದ ನಡುವೆ ತನ್ನ ಯೋಚನೆಗಳನ್ನು ಬಲವಾಗಿ ಅತ್ತ ತಳ್ಳಿ ಕಣ್ಮುಚ್ಚಿ, ಮುಖ ಹಾಕುವಲ್ಲಿಗೆ ಬೆನ್ನುಹಾಕಿ ನಿಂತಿದ್ದ ಶ್ರೀಕೃಷ್ಣನನ್ನು ನೋಡಿ, 'ನಿನ್ನನ್ನು ನೋಡಿ ನೋಡಿ ಬೋರ್ ಹಿಡಿದುಹೋಗಿದೆ ನೋಡಪ್ಪಾ... ಈ ಸ್ಯಾನಿಟರಿ ಇನ್ಸ್‌ಪೆಕ್ಟರನಿಗೆ ಬಂಗಾರದ ಗೋಣಿಚೀಲವನ್ನು ತೆರೆದ ನೀನು ಈ ಬಡಪಾಯಿಗೆ ಒಂದು ಕಳಪೆ ಕಂಪೆನಿಯಲ್ಲಿ ಒಂದು ಕ್ಲಾರ್ಕ್‌ತನವನ್ನಾದರೂ ಕರುಣಿಸಿ ನನ್ನಮ್ಮನ ಅನ್ನದ ಮಡಿಕೆಗೆ ನಾಲ್ಕು ಅಕ್ಕಿಕಾಳನ್ನು ಹಾಕುವ ಸೌಭಾಗ್ಯವನ್ನು ನನಗೆ ಕರುಣಿಸು' ಎಂದು